

ಪ್ಲಾಜಾ ಮೇಯರ್ ಅಥವಾ ಪ್ಲಾಜಾ ಡಿ ಅರ್ಮಾಸ್ ಹೆಸರಿನ ಲೀಮಾ ನಗರದ ಐತಿಹಾಸಿಕ ಚೌಕ



ಪೆರುವಿನ ಸ್ವಾತಂತ್ರ್ಯ ಹೋರಾಟಗಾರ ಜೋಸ್ ಡೆ ಸ್ಯಾನ್ ಮಾರ್ಟಿನ್ ಗೌರವಾರ್ಥ ನಿರ್ಮಿಸಲಾಗಿರುವ ಈ ಸ್ಥಳ ಲೀಮಾದ ಸಾಂಸ್ಕೃತಿಕ, ರಾಜಕೀಯ ಮತ್ತು ಸಾಮಾಜಿಕ ಚಟುವಟಿಕೆಗಳ ಕೇಂದ್ರಬಿಂದು

ಪವಿತ್ರ ರೋಸರಿಯ ಕಾನ್ವೆಂಟ್ ಒಳಗಿರುವ ಗ್ರಂಥಾಲಯ



ಸ್ಪ್ಯಾನಿಷ್, ಆಫ್ರಿಕನ್, ಚೀನೀ ಮತ್ತು ಜಪಾನೀ ಆಹಾರ ಪ್ರಭಾವಗಳ ಮಿಶ್ರಣವಾಗಿ ರೂಪುಗೊಂಡಿದೆ.

ಲೀಮಾದಲ್ಲಿ 'ಮಿಸ್ತುರಾ' ಎಂಬ ಆಹಾರ ಉತ್ಸವವು ವಿಶ್ವಪ್ರಸಿದ್ಧ. 'ಸೆವಿಚೆ' (ಲಿಂಬೆ ರಸ ಬಳಸಿ ತಯಾರಿಸುವ ಕಚ್ಚಾ ಮೀನಿನ ಖಾದ್ಯ), 'ಲೊಮೊ ಸಾಲ್ಟಾಡೊ', 'ಆಂಟಿಕುಚೊಸ್', 'ಪಿಕಾರೊನೆಸ್' (ಸಿಹಿ ತಿನಿಸು, ಇದು ರುಚಿಕರ ಡೋನಟ್ ರೀತಿಯದ್ದು) ತಿನಿಸುಗಳು ಇಲ್ಲಿ ಪ್ರಸಿದ್ಧ.

## ವಲಸಿಗರ ತವರೂರು

ಲೀಮಾ ಒಂದು ರೀತಿ ವಲಸಿಗರ ತವರೂರು. ಈ ವಲಸಿಗರು ತಂತಮ್ಮ ಆಹಾರ, ಸಂಸ್ಕೃತಿ, ಭಾಷೆಯನ್ನು ಪೆರುವಿಯನ್ ಸಂಸ್ಕೃತಿಯೊಂದಿಗೆ ಬೆರೆಸಿದ್ದಾರೆ. ಸ್ಪೇನರು, ಇಟಲಿ, ಜರ್ಮನಿ, ಉತ್ತರ ಅಮೆರಿಕದವರು, ಆಫ್ರಿಕನ್ನರು, ಚೀನೀಯರು, ಜಪಾನೀಯರು ಮುಂತಾದ ವಲಸಿಗರು ಇಲ್ಲಿದ್ದರೂ, ಸ್ಥಳೀಯರು ಕೂಡ ಸಾಕಷ್ಟು ಸಂಖ್ಯೆಯಲ್ಲಿರುವರು. ಸ್ಥಳೀಯರು ಕುಳ್ಳರು. ಅಗಲ ಮುಖ, ಭುಜ ಉಳ್ಳವರು. ಉಬ್ಬಿದ ಗಲ್ಲ, ನಕ್ಕರೆ ಅಷ್ಟೂ ಹಲ್ಲುಗಳು ಕಾಣುವ ಹಾಗೆ ಮುಂದೊಸಡು ಹೊಂದಿರುವರು.

ಲೀಮಾ ನಗರದಲ್ಲಿ ಸ್ಪ್ಯಾನಿಷ್ ಪ್ರಧಾನ ಭಾಷೆಯಾಗಿದ್ದು, ಸ್ಥಳೀಯ ಕ್ವೆಚುವಾ ಮತ್ತು ಐಮಾರಾ ಭಾಷೆಗಳೊಂದಿಗೆ ಮಿಶ್ರಗೊಂಡಿದೆ. ಇಲ್ಲಿ ಆಚರಿಸುವ ಕ್ಯಾಥೊಲಿಕ್ ಧರ್ಮವು ಸ್ಪೇನ್‌ನಿಂದ ಬಂದಿದ್ದು, ಸ್ಥಳೀಯ ಆಚರಣೆಗಳೊಂದಿಗೆ ಮಿಶ್ರಣಗೊಂಡಿದೆ.

16ರಿಂದ 19ನೇ ಶತಮಾನದವರೆಗೆ ಸ್ಪ್ಯಾನಿಷ್ ವಸಾಹತುಗಾರರು, ಕೃಷಿ ಮತ್ತು ಗಣಿಗಾರಿಕೆಗಾಗಿ ಆಫ್ರಿಕಾದಿಂದ ಗುಲಾಮರನ್ನು ಲೀಮಾಕ್ಕೆ ಕರೆತಂದರು. 'ಫೆಸ್ಟೆಜೊ' ಮತ್ತು 'ಮರಿನೆರಾ' ಎಂಬ ಆಫ್ರೊಪೆರುವಿಯನ್ ನೃತ್ಯಗಳು, ಆಫ್ರಿಕನ್ ಲಯ ಮತ್ತು ಸ್ಥಳೀಯ ಶೈಲಿಗಳ ಸಂಯೋಜನೆಯಾಗಿವೆ. 'ಕಜೊನ್' ಎಂಬ ತಾಳವಾದ್ಯ ಆಫ್ರಿಕನ್ ಮೂಲದ್ದು. 'ಆಂಟಿಕುಚೊಸ್' ಎಂಬ ಆಹಾರ ಆಫ್ರಿಕನ್ ಸಂಸ್ಕೃತಿಯ ಪ್ರಭಾವವನ್ನು ಪ್ರತಿನಿಧಿಸುವಂತಿದೆ. ಹಾಗೆಯೇ 'ಚೀಫಾ' ಎಂಬ ಚೀನೀ ಪೆರುವಿಯನ್ ಸಂಸ್ಕೃತಿಯ ಮಿಶ್ರಿತ ತಿನಿಸು ಲೀಮಾದಲ್ಲಿ ಜನಪ್ರಿಯ.

ಪ್ರತಿಕ್ರಿಯಿಸಿ: feedback@sudha.co.in